ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ, ರೈಲ್ವೆ ಇಲಾಖೆ ಮತ್ತು ರೈಟ್ಸ್ (ಕನ್ಸಲ್ಟೆಂಟ್) ಸಹಯೋಗದೊಂದಿಗೆ ತಯಾರಿಸಲಾದ ಜಿಎಡಿ(ಜನರಲ್ ಅರೇಂಜ್‌ಮೆಂಟ್ ಡ್ರಾಯಿಂಗ್)ನು ನಗರಸಭೆಯಿಂದ ಅನುಮೋದನೆ ಪಡೆದು ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆಯ ನಿರ್ದೇಶನದಂತೆ ರೈಲ್ವೆ ಇಲಾಖೆಗೆ ಕಳುಹಿಸಿಕೊಡಲಾಗುವುದು.

ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆಯ ದಾಸ್ತಾನು.

೨೮೭೪(೩೭೫೯)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿ ಪ್ರಸ್ತುತ ಇರುವ ಸಕ್ಕರೆ ದಾಸ್ತಾನಿನ ಪ್ರಮಾಣವೆಷ್ಟು; ಇದರ ಮೌಲ್ಯವೆಷ್ಟು?

ಆ) ಇದರ ವಿತರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆಯ ವಿತರಣೆ ಸಕಾಲಕ್ಕೆ ಸಾಧ್ಯವಾಗದೇ ರೈತರಿಗೆ ಕೊಡಬೇಕಾದ ಕಬ್ಬಿನ ಬೆಲೆಯನ್ನು ನಿಗದಿತ ಸಮಯಕ್ಕೆ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ರೈತರಿಗೆ ಉಂಟಾಗುತ್ತಿರುವ ತೊಂದರೆಯನ್ನು ಪರಿಹರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿ ಇರುವ ದಾಸ್ತಾನಿನ ಪ್ರಮಾಣ ದಿ:೩೦-೬-೦೧ರ ಅಂತ್ಯಕ್ಕೆ ೧೪.೦೭ ಲಕ್ಷ ಟನ್ ಇದ್ದು ಇದರ ಮೌಲ್ಯ ಸುಮಾರು

ರೂ.೧೬೦೦.೦೦ ಕೋಟಿ ಆಗಬಹುದು.

ಆ) ಸಕ್ಕರೆ ವಿತರಣೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಅಗತ್ಯ ಸನ್ನಿವೇಶಗಳಲ್ಲಿ ಹೆಚ್ಚಿನ ಸಕ್ಕರೆ ಬಿಡುಗಡೆಗೆ ಕೇಂದ್ರ ಸರ್ಕಾರವನ್ನು ಕೋರಲಾಗುತ್ತದೆ. ಶೇ.೧೫ರಂತೆ ಲೆವಿ ಸಕ್ಕರೆ ದಾಸ್ತಾನನ್ನು ಭಾರತ ಸರ್ಕಾರವು ಆಗಿಂದಾಗ್ಗೆ ನೀಡುವ ಆದೇಶದಂತೆ ಎತ್ತುವಳಿ ಮಾಡಲಾಗುತ್ತದೆ. ಅದೇ ರೀತಿ ಶೇ.೮೫ರಂತೆ ಮುಕ್ತ ಮಾರುಕಟ್ಟೆ ಸಕ್ಕರೆಯನ್ನು ಕೂಡಾ ಕೇಂದ್ರ ಸರ್ಕಾರವು ಕಾಲಾನುಕಾಲಕ್ಕೆ ಮುಕ್ತ ಮಾರಾಟದ ಕೋಟಾದನ್ವಯ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿರುತ್ತದೆ.

ಇ) ಕೆಲವು ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆಯನ್ನು ನಿಗದಿತ ಸಮಯಕ್ಕೆ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆ ಬಾಕಿ ತೀರುವಳಿ ಮಾಡಲು ತಮ್ಮಲ್ಲಿರುವ ಸಕ್ಕರೆ ಮಾರಾಟ ಮಾಡಬೇಕಾಗಿರುತ್ತದೆ. ಸಕ್ಕರೆ ಬಿಡುಗಡೆಯಾದಂತೆ ಕಬ್ಬಿನ ಬೆಲೆ ತೀರುವಳಿಯ ಪ್ರಕ್ರಿಯೆ ನಿರಂತರವಾಗಿ ನಡೆದಿರುತ್ತದೆ. ಕೆಲವೊಂದು ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಈ ಪ್ರಕ್ರಿಯೆಗೆ ತಡೆಯುಂಟಾಗಿ ಅಲ್ಪ ಕಾಲಾವಧಿಗೆ ಬಾಕಿ ಉಳಿಯುವ ಸಾಧ್ಯತೆ ಇರುತ್ತದೆ. ಸಕ್ಕರೆ ಮಾರಾಟವಾದಂತೆ ಈ ಬಾಕಿ ತೀರುವಳಿಯಾಗುತ್ತಿರುತ್ತದೆ. ಹಾಗೂ ಹೊಸದಾಗಿ ಕಬ್ಬು ಸರಬರಾಜು ಮಾಡಿದಂತೆಲ್ಲಾ ಬಾಕಿ ಪುನಹ ಸೇರಿಕೊಳ್ಳುತ್ತಿರುತ್ತದೆ. ಈ ಪ್ರಕ್ರಿಯೆ ಹೊರತುಪಡಿಸಿ ಇನ್ನಾವುದೇ ಕಾರಣಕ್ಕೆ ಕಬ್ಬಿನ ಬೆಲೆ ಬಾಕಿ ಉಳಿದುಕೊಂಡಿದ್ದರೆ ಅಂತಹ ಕಾರ್ಖಾನೆಗಳನ್ನು ಗುರುತಿಸಿ ಕೂಡಲೇ ಬಾಕಿ ತೀರುವಳಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ. ಪ್ರತಿ ೨ ತಿಂಗಳಿಗೊಂದಾವರ್ತಿ ಪರಿಸ್ಥಿತಿ ಅಧ್ಯಯನ ಮಾಡಲು ಸಭೆ ಕರೆದು ಪರಾಮರ್ಶಿಸಲಾಗುತ್ತಿದೆ.

ಬೀದರ್-ಶ್ರೀರಂಗಪಟ್ಟಣ ಹೆದ್ದಾರಿಯ ಕಾಮಗಾರಿ.

೨೮೭೫(೩೭೪೦)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಬೀದರ್-ಶ್ರೀರಂಗಪಟ್ಟಣ ಹೆದ್ದಾರಿಯ ಕಾಮಗಾರಿಯನ್ನು ಆರಂಭ ಮಾಡಲಾಗಿದೆಯೆ?